R ga No BG 155

— ಶ್ರೀ —

17—4—1964

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಕಂಗಳಿಗೆ 6 ಅಣೆ

Protect the cow

ಸ್ಥಾಪಕರು– ಅರಮನೆ ಸಿಂಸ್ಥೇದಾರ್ ಎಂ. ವಿ ಸುಬ್ಬರಾಯರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಕೇಂದ ನೌಕರರಿಗೆ ತುಟ್ಟಿ ಭತ್ಯ ಏರಿಕೆ

ರೂ 320 ಕ್ಕೆ ಕಡಿಮೆ ವೇತನ ಇರುವ ಸಿವಿಲಿಯನ್ ನೌಕರರಿಗೆ ತುಟ್ಟಿ ಭತ್ಯ ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ರೂ 320 ಮತ್ತು 399 ರೊಳಗೆ ಮೂಲ ವೇತನ ಪಡೆಯುವವರಿಗೆ ತುಟ್ಟಿಭತ್ಯ ಅನುಕೂಲವನ್ನು ಏರ್ಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಕಳೆದ ವರ್ಷ ನವೆಂಬರ 1 ರಿಂದ ಅವರಿಗೆ ಈ ಸೌಲಭ್ಯ ದೊರೆಯುವುದು ಸುಮಾರು 20 ಲಕ್ಷ ನೌಕರರಿಗೆ ಇದರಿಂದ ಅನುಕೂಲವಾಗುವುದು ಇದರಿಂದ ವರ್ಷಕ್ಕೆ ರೂ 13 ಕೋಟಿ ಹೆಚ್ಚುವೆಚ್ಚವಾಗುವುದು

ಸ್ವೋಚ್ಛೆಯ ಫಲ

ಲಂಡನ್ನಿಗೆ ಬಹಳ ದೂರವಿರದ ಬರ್ಗಿಸ್ ಹಿಲ್ ಶಾಲೆ ವಾರಾಂತ್ಯದಲ್ಲಿ ಬಂದಾಯಿತು. ಮಕ್ಕಳು ಬೇಕಾದ್ದು ಮಾಡಬಹುದಾದ ಅಧುನಿಕ ಶಿಕ್ಷಣ ಪದ್ಧತಿಗೆ ಜಾಗ ಒಂದು ಸಾಂಪ್ರದಾಯಿಕ ನಿಬಂಧನೆಗಳು ಹೋದವು ಶಾಲೆಯ ಪಕ್ಕ ಧೂಮಪಾನ, ಕುಡಿತ ಮಾಡಬಹುದು ಇಷ್ಟಬಂದಾಗ ಶಾಲೆಗೆ ತೆರಳಬಹುದು, ಹುಡುಗರಿಂಗೆ ಅವಕಾಶ ಉಂಟು ಮಾಡಿದ ಉಪಾಧ್ಯಾಯ ಒಂದು ದಿನ ತಾಯಿಯದು ಕಷ್ಟ, ಈ ಸ್ಥಿತಿಗೆ ಬಂದು ಶಾಲೆ ಬಂದಾಯಿತು

★

ಬಿಜಾಪುರ ಜಿಲ್ಲೆಯ ಬಾಗಲ್ಕೋಟೆ ಕ್ಷೇತ್ರದಿಂದ ವೈ ಎಂ ವಿಧಾನ ಸಭೆ ಉಪ ಚುನಾವಣೆಗೆ ಪ್ರದೇಶ ಕಾಂಗ್ರೆಸು ಅಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಸ್ಪರ್ಧಿಸುವರೆಂದು ಬೆಂಗಳೂರು ವಾರ್ತೆ. ಆ ಕ್ಷೇತ್ರದ ಶ್ರೀ ಮುನ್ನಾಳಿಯರು ಸದಸ್ಯತ್ವಕ್ಕೆ ರಾಜೀನಾಮೆ ಅರ್ಪಿಸಿದ್ದಾರೆ.

ಮೈಸೂರಿನಲ್ಲಿ ಸಬ್ ಇನ್ಸ್‌ಪೆಕ್ಟರಿಂ ಶಿಕ್ಷಣ ಕೇಂದ್ರ ಆರಂಭವಾಗುವದು

ಮಹಂತರಿಗೆ ಮದುವೆ

ನಿಖಿಲ ಭಾರತೀಯ ನಿರಂಜನಿ ಸಾಧು ಮಹಾಸಭೆಯ ಅಧ್ಯಕ್ಷರಾದ ಮಹಂತ ತುಳಸೀದಾಸ ಶಾಸ್ತ್ರಿಯವರು ಡಾ|| ಸಿ. ಪಿ. ರಾಮಸ್ವಾಮಯ್ಯರವರ ನೇತೃತ್ವದಲ್ಲಿನ ಹಿಂದೂ ಧಾರ್ಮಿಕ ಉಂಬಳಿ ಸಮಿತಿಗೆ ಮನವಿ ಮಾಡಿ, ಮಹಂತರುಗಳಿಗೆ ಮದುವೆ ಮಾಡಿಕೊಳ್ಳಲು ಅವಕಾಶ ಇರಬೇಕೆಂದು ನುಡಿದರು. ಆ ರೀತಿ ಮಾಡಿದರೆ ಅವರು ದಾರಿತಪ್ಪಲು ಅವಕಾಶ ಇರುವುದಿಲ್ಲ ಎಂದರು. ಮಹಂತರು ವಿವಾಹಕ್ಕೆ ರಾಜಸ್ಥಾನ ಸರ್ಕಾರ ಅನುಮತಿಸಿದೆ ಎಂದು ಅವರು ತಿಳಿಸಿದರು ಶ್ರೀರಾಮನ ಗುರು ವಶಿಷ್ಠರು ಮತ್ತು ಪರಾಶರ ಮುನಿಗಳು ಮದುವೆ ಆಗಿದ್ದರೆಂಬುದಾಗಿ ಅವರು ನುಡಿದರು.

ಸಭೆಯಲ್ಲಿ ಸದಸ್ಯರಲ್ಲದವರು

ಲೋಕಸಭೆಯಲ್ಲಿ ನಿನ್ನೆ ಪ್ರಮಾಣ ವಚನವನ್ನು 456 ಸದಸ್ಯರು ಸ್ವೀಕರಿಸಿದರು. ಪ್ರಮಾಣ ವಚನ ಸಮಾರಂಭ ನಡೆಯುತ್ತಿದ್ದಾಗ ಮಾಜಿ ಸದಸ್ಯರೋರ್ವರು 10 ನಿಮಿಷಗಳ ವರೆಗೆ ಸಭೆಯಲ್ಲಿ ಕುಳಿತಿದ್ದರು ಆನಂತರ ಸಭೆಗೆ ಒಂದನೇ ಹಿಂದೆ ತಾವು ಕುಳಿತುಕೊಳ್ಳುತ್ತಿದ್ದ ಸ್ಥಳದಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಿಸಿದರು ಅಧಿಕಾರಿಗಳ ಗಮನಕ್ಕೆ ಈ ವಿಚಾರ ಬರುವ ಮೊದಲೇ ಅವರು ಸ್ಥಳದಿಂದ ಹೊರಗೆಹೋಗಿದ್ದರು ತನಿಖೆ ನಡೆಯುತ್ತಿದೆ ಎಂದು ದೆಹಲಿ ವಾರ್ತೆ.

★

ದೆಹಲಿಯ ಮಾಜಿ ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾದ ಮಿಸ್ಟಾರ್ ಅಹಮದರು ಕಾಂಗ್ರೆಸು ಸೇರಿದರು

ಶಾಸ್ತ್ರಿಯವರಿಗೆ ಆಶ್ಚರ್ಯ

ಗಾಬರಿ ಉಂಟು ಮಾಡುವಷ್ಟರ ಮಟ್ಟಿಗೆ ಭಾರತದಲ್ಲಿ ಜಾತೀಯತೆ, ಭಾಷೆ ವ್ಯಾಮೋಹ ಬೆಳೆಯುತ್ತಿದೆ ಎಂಬುದಾಗಿ ಭಾರತ ಸರ್ಕಾರದ ಗೃಹ ಮಂತ್ರಿ ಶ್ರೀ ಲಾಲಬಹದ್ದೂರಶಾಸ್ತ್ರಿ ನಿನ್ನೆ ಹಂದ್ವಾರದಲ್ಲಿ ನುಡಿದರು ಶ್ರೀ ಸಿ ರಾಜಗೋಪಾಲಾಚಾರಿಯಂಥಹ ನಾಯಕರು ಡಿ ಎಂ ಕೆ ಮತ್ತು ಅಕಾಲಿಗಳಿಗೆ ಬೆಂಬಲಿಸುವದು ಆಶ್ಚರ್ಯಕರ ಎಂದರು.

ಮಿಲಿಯ ಡಾಲರು ವೆಚ್ಚ

ಅಂಗೋಲಾ ಘಟನೆಗಳ ಬಗ್ಗೆ ಪೋರ್ಚುಗಲ್ಲು ತನ್ನ ಅಭಿಪ್ರಾಯವನ್ನು ಅಮೆರಿಕಾದಲ್ಲಿ ತಿಳಿಸಲು ಒಂದು ಸಾರ್ವಜನಿಕ ಸಂಸ್ಥೆಯೊಡನೆ ವರ್ಷಕ್ಕೆ ಒಂದು ಮಿಲಿಯ ವೆಚ್ಚದ ಕಾಂಟ್ರಾಕ್ಟ ಮಾಡಿಕೊಂಡಿದೆ ಎಂದು ನ್ಯೂಯಾರ್ಕ್ ವಾರ್ತೆ

೦೦೦

ಬೆಲ್ಗ್ರೇಡಿನಲ್ಲಿ ಮಾರಾಟವಾಗುತ್ತಿರುವ ಸಣ್ಣ ಪುಸ್ತಕದಲ್ಲಿ ಘೋಷಿಸಿರುವಂತೆ, ಪ್ರಪಂಚದ ಕ್ರಾಂತಿಯ ಕೇಂದ್ರ ಮಾಸ್ಕೋನಿಂದ ಪೀಕಿಂಗಿಗೆ ಬದಲಾವಣೆ ಆಗಿದೆ ಎಂದು ಚೀನಿ ಕವಿಗಳು ತಿಳಿಯುತ್ತಾರೆ.

ಭಾರತ–ಪಾಕಿಸ್ತಾನ ಗಡಿ ಗಾಯಾದ ಒಳ ಪಾಕಿಸ್ತಾನ ಅಕ್ರಮ ಸಾಗಾಣಿಕೆ ಗಾಂದಿ ವಿರುದ್ಧ ಭಾರತ ಪೋಲೀಸರು ಇವರಲ್ಲಿ ನಿನ್ನೆ ಬೆಳಿಗ್ಗೆ ಹೊಡೆದಾಟವಾಗಿ ಓರ್ವ ಪಾಕಿಸ್ತಾನಿ ಸತ್ತನೆಂದು ಅಮೃತಸರದ ವಾರ್ತೆ

ಪುಣೆ ವಿಶ್ವವಿದ್ಯಾನಿಲಯದ ಮಾಜಿ ಉಪ ಕುಲಪತಿ ಡಾ|| ಬಿ. ಆರ್ ಪರಾಂಜಪೆಯವರು ಮಾಡ್ಕೋವದಲ್ಲಿ ನಿನ್ನೆ ಹೇಳಿಕೆಯಿತ್ತು, ಗೋವಾದಲ್ಲಿ ಮಂತರಿ ಭಾಷೆ ಜಾರಿಗೆ ಬರಬೇಕೆಂದು ತಿಳಿಸಿದರು.

ನಾಳೆಯ ಹಂಚಾಂಗ

ಅನಂತ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಚಾಕ್ಷ್ಯಯ್ಯ ಜೋಯಿಸರಿಂದ

18 ಚತುರ್ದಶಿ . ಹಸ್ತ

ವಿವಿಧ ವಿಷಯಗಳು

ಅಪೀಮು ಕಾನೂನು ಪ್ರಕಾರ ೭ ವರ್ಷ ದಂಡನೆಗೆ ಗುರಿಯಾಗಿ ಹೈ ಕೋರ್ಟಿನಲ್ಲಿ ಅಪೀಲು ನಡೆಯುತ್ತಿದ್ದಾಗ ಜಾಮೀನು ಮೇಲೆ ಹೊರಟುಹೋದ ಮದ್ರಾಸಿನ ಲಾಲ್ಕುಂಡ, ವಾಷ್ಮೆಂಟ್ ಪೇಟೆಯ ಸಯ್ಯದ್ ಮೋಹಿದ್ದೀನ್ ಎಂಬವನು ನಿನ್ನೆ ಬಂಧಿತನಾದನು. ಮದ್ರಾಸೀದಿಯೊಂದರಲ್ಲಿ ಅವನು ಮೊಲ್ವಿ ಎಂಬುದಾಗಿ ಹೇಳಿಕೊಂಡಿದ್ದನು

ಈ ಮಾಹೆ 23 ನೆಯ ತಾ|| ಬೆಳಿಗ್ಗೆ 9 ಗಂಟೆಗೆ ಕೃಷ್ಣರಾಜೇಂದ್ರನಗರ ಜಯಮಾನು ಅಡಮಾನ ಸಹಕಾರ ಸಂಘ, ಲಿ. ಇದರ ನೂತನ ಕಟ್ಟಡದ ಉದ್ಘಾಟನೆಯನ್ನು ಮುಖ್ಯ ಮಂತ್ರಿ ಶ್ರೀ ಎಸ್. ಆರ್. ಕಂಠಿಯವರು ನೆರವೇರಿಸುವರು.

ಅಮೆರಿಕ ಎಲೆಕ್ಟ್ರಿಕ್ ಕಂಪೆನಿಯ ಮುಖ್ಯಸ್ಥರಾದ ಡಾ|| ಜೆ. ಹರ್ಬರ್ಟ್ ಹಾಲೋವೇ ನ್ಯೂಯಾರ್ಕಿನಲ್ಲಿ ನಿನ್ನೆ ಹೇಳಿಕೆಯಿತ್ತು, ವಜ್ರವನ್ನು ಶೂನ್ಯ ಮಾಡುವ ಬಗೆಯ ಕಿರಣವನ್ನು ಪತ್ತೆ ಮಾಡಿದೆ ಎಂದರು.

ವೈಸೂರು ನಗರದ ದೊಡ್ಡಕೆರೆಯ ಮೈದಾನದಲ್ಲಿ ಪುರಸಭೆಯ ಸ್ಟೇಡಿಯಂ ನಿರ್ಮಾಣದ ಶಂಕುಸ್ಥಾಪನೆಯನ್ನು ನಿನ್ನೆ ಸಂಜೆ ರಾಜ್ಯಪಾಲರು ನೆರವೇರಿಸಿದರು.

ಭಾರತ ಪಾರ್ಲಿಮೆಂಟಿನ ಉಭಯ ಸಭೆಗಳನ್ನು ಉದ್ದೇಶಿಸಿ ಭಾರತ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ನಾಳೆ ಬೆಳಿಗ್ಗೆ ಭಾಷಣ ಮಾಡುವರು.

ಮದ್ರಾಸು ನಗರದಲ್ಲಿ ಉಂಟಾಗಿರುವ ಹಾಲಿನ ಅಭಾವದ ನಿವಾರಣೆಗೆ ದಕ್ಷಿಣ ಮದ್ರಾಸಿನಲ್ಲಿ ಹಾಲಿನ ಕಾಲನಿಯನ್ನು ಮದ್ರಾಸು ಸರ್ಕಾರ ಸ್ಥಾಪಿಸುವ ಸೂಚನೆ ಹೊಂದಿದೆ

ಲಂಡನ್ನಿನ ಸ್ವತಂತ್ರ ಅಭಿಪ್ರಾಯದ ಪತ್ರಿಕೆ ಟೈಂಸ್, ಭಾರತದ ಅಧ್ಯಕ್ಷತೆಗೆ ಡಾ|| ಎಸ್ ರಾಧಾಕೃಷ್ಣ ಸೂಚಿತವಾಗಿರುವದನ್ನು ಸ್ವಾಗತಿಸಿದೆ.

ಏಸ್ಕಿಂ ಹಾಗೂ ಎಲ್ಲ ವಿಧದ ಸಿಹಿಗೆ ಶೇಕಡ 15 ತೆರಿಗೆಯನ್ನು ಬ್ರಿಟನ್ ವಿಧಿಸಿದೆ ಎಂದು ಲಂಡನ್ ವಾರ್ತೆ.

ಇಂದಿನ ಜಪಾನೀ ಸ್ತ್ರೀಯರು

ಒಂದು ಜಮಾರ್ಜ ಶಕ್ತಿವರ್ತಿಯಾಗಲಿರುವ ರಾಜಕುಮಾರಿ ವೇಟಿಕೋಳಿಂದ ಹಿಡಿದು, ಮೃದು ವಾಕಿನ ಅಂಗಡಿ ಹುಡುಗಿ, ಕೀಳುದರ್ಜೆಯ ವಿಲ್ಲು ಜೆಲಸಗಾ ರಳು, ಮತ್ತ ಅಲ್ಲಿನ ಗಂಡಸರ ಅಧೀನರಾಗಿದ್ದ ಎಲ್ಲ ವ ಹಿಳೆಯರೂ ಸ್ವಾತಂತ್ರ್ಯ ಹುಡುಕಿದವರೂ ಪಡೆದವರೂ ಆಗಿರುತ್ತಾರೆ ; 2000 ಪುರುಷರ ಬಗ್ಗೆ ಸರ್ವೇ ನಡೆ ಸಿದ ಒಂದು ನಾಸಪತಿ ಕೆ ನಿಜಾಂಶವನ್ನು ಈ ರೀತಿ ಹೊರಗೆಡವಿದೆ– ಶೇಕಡ 50 ಮಂದಿ ಹೆಂಡತಿಯರ ಅಧೀನರಾಗಿದ್ದಾರೆ.

ಶೇಕಡ 92 ಮಂದಿ ಗಂಡಂದಿರು 15 ಡಾಲರುಗಳಿಗೆ ಹೆಚ್ಚಿನ ವ್ಯಾಪಾರವ ನ್ನೆಲ್ಲಾ ತಮ್ಮ ಹೆಂಡಂದಿರ ನಿರ್ಧಾರಕ್ಕೆ ಬಿಡುತ್ತಾರೆ ; ಸಣ್ಣ ವಿಚಾರಗಳಲ್ಲೂ ಕೂಡ ಶೇಕಡ 65 ಮಂದಿ ಗಂಡಂದಿರು ತಮ್ಮ ಹೆಂಡಂದಿರ ತೀರ್ಮಾನಕ್ಕೆ ಬಿಡು ತ್ತಾರೆ ; ಶೇಕಡ 85 ಮಂದಿ ಜಪಾನಿ ಪುರುಷರು ತಮ್ಮ ಜೋಡುಗಳನ್ನು ತಾವೇ ಒದಿಸಿಕೊಳ್ಳುತ್ತಾರೆ : ಶೇಕಡ 78 ಮಂದಿ ಗಂಡಸರು ತಮ್ಮ ಬೆಳಿಗಿನ ಫಲಾಂವನ್ನು ತಾವೇ ತಯಾರಿಸಿಕೊಳ್ಳುತ್ತಾರೆ : ಶೇಕಡ 75 ಮಂದಿ ಗಂಡಂದಿರು ತಾವು ರಾತ್ರಿ 10 ಗಂಟೆ ಮೇಲೆ ಬರುವುದಾದರೆ, ಮುಂಜೆಯೇ ತಮ್ಮ ಹೆಂಡತಿಯರಿಗೆ ತಿಳಿಸಿರು ತ್ತಾರೆ ; ಪ್ರತಿ 5 ಗಂಡಸರಲ್ಲಿ ನಾಲ್ವರು ತಮ್ಮ ಸಂಬಳ ಸಾರಿಗೆ ತನಿಖೆಯನ್ನು ತಮ್ಮ ಹೆಂಡತಿಯರಿಗೆ ಒಪ್ಪಿಸಿರುತ್ತಾರೆ.

ಜಪಾನಿ ಸ್ತ್ರೀಯರು ತಮ್ಮ ಉದ್ದವಾದ ಕಪ್ಪು ಕೂದಲನ್ನು ಗಂಟುಹಾ ಕುತ್ತಾರೆ ; ಅದಕ್ಕೆ ಕೆಂಪು ಅಥವಾ ಚಿನ್ನದ ಬಣ್ಣ ಕೊಡುತ್ತಾರೆ ? ಅವರು ಬಹಿ ರಂಗವಾಗಿ ಧೂಮ ಪಾನ ಮಾಡುತ್ತಾರೆ, ಕುಡಿಯುತ್ತಾರೆ, ತಿನ್ನುತ್ತಾರೆ ; ಕಾರ್ ಗಳನ್ನೂ ಟ್ಯಾಕ್ಸಿಗಳನ್ನೂ ನಡಸುತ್ತಾರೆ ; ವೋಟುಮಾಡುತ್ತಾರೆ, ಅಧಿಕಾರ ವಹಿ ಸುತ್ತಾರೆ, ಎಸಾಟಿಂಗುಗಳಲ್ಲಿ ಹಾಜರಾಗುತ್ತಾರೆ : ಶತಮಾನಗಳ ಹಳೆಯದಾದ ವೇಶ್ಯಾವೃತ್ತಿಯನ್ನು ನಿರ್ಮೂಲಗೊಳಿಸುವಷ್ಟು, ಡಿವೋರ್ಸ್ (ಪಾರ್ಲಿಮೆಂಟು) ಸದಸ ರನ್ನೂ ಮಂತ್ರಿಗಳನ್ನೂ ಖಂಡಿಸುವಷ್ಟು, ಕುಡಿತ ವಿರುದ್ಧ ಶಾಸನದ ಮೇಲೆ ನಿಗ್ರಹವಷ್ಟು, ಜಪಾನೀ ಮಹಿಳಾ ಗುಂಪುಗಳು ಬಲಯುತವಾಗಿವೆ.

ಮಿಂಚಿನಿಂದ ಸಾವು

ವಿಶ್ವದಲ್ಲಿ ಮಿಂಚಿನ ಹೊಡೆತದಿಂದ ಸ್ತ್ರೀಯರಿಗಿಂತ ಪುರುಷರ ಸಾವೇ ಹೆಚ್ಚಾಗಿರುವುದೆಂದೂ, ಒಬ್ಬ ಹೆಂಗಸಿನ ಸಾವಿಗೆ 9 ಮಂದಿ ಗಂಡಸರ ಸಾವಾಗು ವುದೆಂದೂ, ವರ್ಷಕ್ಕೆ ಈ ಬಗ್ಗೆ 600 ಮಂದಿ ಸಾಯುವರೆಂದೂ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

★

ನಿಮಗಿದು ಗೊತ್ತೇ

ಭೂಮಧ್ಯ ರೇಖೆಯ ಹತ್ತಿರವು 10 ದಿನಗಳಲ್ಲಿ 1 ಕಿಲೋಮೀಟರು ಸರಿಯುತ್ತದೆ.

Help The 'Gorakshana'

Advertise in Goraksana and help the pious cause

ಗೋರಕ್ಷಣಾ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣಾ ಪತ್ರಿಕೆಗೆ ಸುಪಾಯಿದ್ಯನ್ನು ನುಟ್ಟು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ಜಾಹೀರಾತುಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ವುಡ್‌ಲ್ಯಾಂಡ್ಸ್ ಸ್ಟುಡಿಯೋ ಶುಕ್ರವಾರ 10 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ– ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜಯಪ್ರದ 4 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾರಂಗಪಾಣಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ

[ದಿನವಹಿ 3 ಆಟಗಳು]

SHAKTI SUDHA

A Superb Tonic



ಅಮೇರಿಕಾ ರಾಜಕೀಯ ಕ್ರಮ ತಿಳಿಸುವ ದೃಶ್ಯಗಳು

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press, Chamarajapuram, Mysore 4.